ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು	:	ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	354
ಉತ್ತರಿಸಬೇಕಾದ ದಿನಾಂಕ	:	15.12.2021.
ಉತ್ತರಿಸಬೇಕಾದ ಸಚಿವರು	:	ಮಾನ್ಯ ಪಶುಸಂಗೋಪನೆ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ	KYAFSU ವಿಶ್ವವಿದ್ಯಾಲಯ ಬೀದರ್ ಅಧೀನದಲ್ಲಿರುವ ಮೀನುಗಾರಿಕೆ ಕಾಲೇಜಿನಲ್ಲಿ India Coordinated Research Project ಯೋಜನೆಗೆ 75% ಸಂಸ್ಥೆಯಿಂದ ಸಹಾಯ ಧನವಿದ್ದು 25% ರಾಜ್ಯ ಸರ್ಕಾರದಿಂದ ನೀಡಲಾಗಿದ್ದ 2020-21 ರಿಂದ 2021-22ನೇ ಸಾಲಿನಲ್ಲಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ;	ಕುಲಸಚಿವರು, ಕರ್ನಾಟಕ ಪಶುವೈದ್ಯಕೀಯ ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಇವರು ನೀಡಿರುವ ಮಾಹಿತಿಯಂತೆ KVAFSU, ಬೀದರ್ ಅಧೀನದಲ್ಲಿ ಮೀನುಗಾರಿಕೆ ಮಹಾವಿದ್ಯಾಲಯದಲ್ಲಿರುವ AICRP-PHT ಯೋಜನೆಗೆ ರಾಜ್ಯ ಸರ್ಕಾರದ ಶೇಕಡ 25 ಭಾಗವನ್ನು ವಿಶ್ವವಿದ್ಯಾಲಯಕ್ಕೆ ಪ್ರತಿ ವರ್ಷ ರಾಜ್ಯ ಸರ್ಕಾರ ಲೆಕ್ಕ ಶೀರ್ಷಿಕ ಸಂಖ್ಯೆ: 2403-00-101-0-06-103 ಅಡಿಯಲ್ಲಿ ಒದಗಿಸಲಾಗುತ್ತಿರುವ ಅನುದಾನದಲ್ಲಿ ಭರಿಸಲಾಗುತ್ತಿದೆ. 2020-21ನೇ ಸಾಲಿನಲ್ಲಿ ಈ ಯೋಜನೆಗೆ ಒಟ್ಟು ವೆಚ್ಚ ರೂ.67,70,199.60 ಈ ಪೈಕಿ ಶೇಕಡಾ 25 ರಷ್ಟು ವೆಚ್ಚ ಅಂದರೆ ರೂ. 16,92,549.90 ಗಳನ್ನು ಮೇಲಿನ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಬಿಡುಗಡೆಯಾದ ಅನುದಾನದಲ್ಲಿ ಭರಿಸಲಾಗಿದೆ. ಅದರಂತೆ 2021-22ನೇ ಸಾಲಿನಲ್ಲಿ ಈ ಯೋಜನೆಗೆ 30ನೇ ನವೆಂಬರ್ 2021 ರವರೆಗೆ ಒಟ್ಟು ರೂ. 35,13,576.00 ಆಗಿರುತ್ತದೆ. ಈ ಪೈಕಿ ಶೇಕಡಾ 25 ರಷ್ಟು ವೆಚ್ಚ ಅಂದರೆ ರೂ. 8,78,394.00 ಗಳನ್ನು ಮೇಲಿನ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಬಿಡುಗಡೆಯಾದ ಅನುದಾನದಲ್ಲಿ ಭರಿಸಲಾಗಿದೆ.
ಆ	ಈ ಯೋಜನೆಗೆ ಯಾವ ಆಧಾರದ ಮೇರೆಗೆ ಸಿಬ್ಬಂದಿಗಳನ್ನು ನೇಮಕಾತಿ ಮಾಡಲಾಗಿದೆ; ನೇಮಕಾತಿ ಮಾಡಿರುವ ಸಿಬ್ಬಂದಿಗಳಿಗೆ ಸರ್ಕಾರದ ಸೇವಾ ನಿಯಮಾವಳಿಯಲ್ಲಿ ವೇತನ ಶ್ರೇಣಿ, ವಾರ್ಷಿಕ ವೇತನ ನೀಡಲು ಅವಕಾಶವಿದೆಯೇ? (ಇದ್ದಲ್ಲಿ ವಿವರವಾದ ಮಾಹಿತಿ ನೀಡುವುದು)	ಇದೊಂದು ಸಂಶೋಧನಾ ಯೋಜನೆಯಾಗಿದ್ದು, ಧನಸಹಾಯ ಸಂಸ್ಥೆಯು ಪಟ್ಟಿ ಮಾಡಿರುವ ಸಿಬ್ಬಂದಿಗೆ ತಕ್ಕಂತೆ, ಪ್ರಧಾನ ಸಂಶೋಧಕರ ಪ್ರಸ್ತಾವನೆಯ ಮೇರೆಗೆ (MoU) ಸಿಬ್ಬಂದಿಗಳನ್ನು ಯೋಜನೆ ಮುಗಿಯುವರೆಗೂ CO-terminus ಆಧಾರದ ಮೆಲೆ ನೇಮಕ ಮಾಡಿಕೊಳ್ಳಲಾಗಿದೆ. ಇದು ಸಂಶೋಧನಾ ಯೋಜನೆಗೆ ಒಳಪಟ್ಟಿದ್ದು ವಾರ್ಷಿಕ ಯೋಜನೆಯ ಪ್ರಗತಿಯನ್ನು ಆಧರಿಸಿ ಅನುದಾನ ಬಿಡುಗಡೆ ಮಾಡಿರುತ್ತದೆ. ಸದರಿ ಸಿಬ್ಬಂದಿಗಳ ಸಂಶೋಧನಾ ಯೋಜನೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ರಾಜ್ಯ ಸರ್ಕಾರದ ನಿಯಮಾವಳಿಗಳು ಅನ್ವಯಿಸಿ ವೇತನ ನೀಡಿರುವುದಿಲ್ಲ. ಬದಲಾಗಿ ಸಂಶೋಧನಾ ಧನ ಸಹಾಯ ಸಂಸ್ಥೆ ನಿಗದಿಪಡಿಸಿದ ಸಿಬ್ಬಂದಿಗಳ ವೇತನ ಶ್ರೇಣಿಗೆ ಅನುಗುಣವಾಗಿ ವೇತನ ನೀಡಲಾಗಿದೆ. ಮುಂದುವರೆದು 2020-21ನೇ ಮತ್ತು 2021-22ನೇ ಸಾಲಿನಲ್ಲಿ ವಾರ್ಷಿಕ ವೇತನ ಬಡ್ತಿ ನೀಡಿರುವುದಿಲ್ಲವೆಂದು ವಿಶ್ವವಿದ್ಯಾಲಯವು ವರದಿಸಿದ್ದು, ಈ ಕುರಿತು ಸರ್ಕಾರದ ಪರಿಶೀಲನೆಯಲ್ಲಿದೆ.

ಇ-ಪಸಂಮೀ 304 ಸಲೆವಿ 2021

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ ಸಚಿವರು